ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಒ.ಎಸ್.ನಂಃ 115/22**

ಡಿಡಬ್ಲ್ಯುಃ -1

<u>ದಿನಾಂಕಃ 29.07.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿಯ ಪರ ವಕೀಲರಾದ ಶ್ರೀ. ಬಿ ಕೆ ಎಸ್ ರವರಿಂದಃ-</u>

ನಾನು ಈ ದಾವೆಯಲ್ಲಿ 2 ನೇ ಪ್ರತಿವಾದಿಯಾಗಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಾಯಿ ಎಂದರೆ ಸರಿ. ನಿಪಿ-19 ಫೋಟೋದಲ್ಲಿ ಗೋಡೆಯ ಎಡ ಭಾಗ ಇರುವ ಜಾಗ ಯಾರದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಗೋಡೆಯ ಬಲ ಭಾಗದಲ್ಲಿರುವ ಜಾಗ ನನ್ನದು ಎಂದರೆ ಸರಿ. ಸದರಿ ನಿಪಿ-19 ಫೋಟೋದಲ್ಲಿ ಗೋಡೆಯ ಎಡ ಭಾಗ ಇರುವ ಜಾಗ ವಾದಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಅದು ಪೈಸಾರಿ ಜಾಗ ಆಗಿರುತ್ತದೆ. ಸದರಿ ಜಾಗ ಪೈಸಾರಿ ಜಾಗ ಎಂದು ಹೇಳಲು ನೀವೇನಾದರು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲಎನ್ನುತ್ತಾರೆ. ನಮ್ಮ ಮನೆಯ ಹಿಂಭಾಗ ವಾದಿಗೆ ಸೇರಿದ ಜಾಗ ಇರುತ್ತದೆ. ನಿಪಿ-19 ಫೋಟೋದಲ್ಲಿ ಕಾಣುವ ನಮ್ಮ ಮನೆಯ ಗೋಡೆ ಯಾವ ದಿಕ್ಕಿ/ಭಾಗದಲ್ಲಿ ಇದೆ ಎಂದರೆ ಸಾಕ್ಷಿಯು ನನಗೆ ದಿಕ್ಕು ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ನಮ್ಮ ಮನೆಯ ಹಿಂಭಾಗ ವಾದಿಗೆ ಸೇರಿದ ಜಾಗ ಇದೆ ಎಂದು ಹೇಳಲು ನಾನು ನ್ಯಾಯಾಲಯಕ್ಕೆ ಫೋಟೋಗಳನ್ನು ಹಾಜರು ಪಡಿಸಿದ್ದೇನೆ. ನಿಪಿ-19 ರ ಗೋಡೆಯ ಹಿಂಭಾಗ ಇರುವ ಜಾಗ ವಾದಿಗೆ ಸೇರಿದ್ದು ಎಂದರೆ ಸರಿ. ನಮ್ಮ ಮನೆ ಮತ್ತು ನಿವೇಶನ ಸೇರಿ ಒಟ್ಟು 4 ಸೆಂಟು ಇರುತ್ತದೆ. ನಮ್ಮ ಮನೆ ಎಷ್ಟು ಚದರ ಅಡಿ ಇದೆ ಎಂದು ನನಗೆ ಗೊತ್ತಿಲ್ಲ. ನಿಡಿ-3 ರ ಪ್ರಕಾರ ನಮ್ಮನಿವೇಶನ ವಿಸ್ತೀರ್ಣ 161.837026 ಮತ್ತು ಕಟ್ಟಡದ ಪ್ಲಿಂತ್ ಏರಿಯಾ 161.837026 ಚದರ ಮೀಟರ್ ಇರುತ್ತದೆ ಎಂದರೆ ಸರಿ. ನಮ್ಮ ನಿವೇಶನದ ಪೂರ್ತಿ ವಿಸ್ತೀರ್ಣದಲ್ಲಿ ನಮ್ಮ ಮನೆಯ ಕಟ್ಟಡ ಇದೆ ಎಂದರೆ ಸರಿ. ಸದರಿ 161.837026 ಜಾಗ ಬಿಟ್ಟರೆ ನಮಗೆ ಬೇರೆ ಜಾಗ ಇಲ್ಲ ಎಂದರೆ ಸರಿ. ಮನೆ ಕಟ್ಟ ಬೇಕಾದರೆ ಮತ್ತೊಂದು ಮನೆಯಿಂದ ಕನಿಷ್ಟ ಮೂರು ಅಡಿ ಜಾಗ ಬಿಟ್ಟು ಕಟ್ಟಬೇಕು ಎಂದು ನಿಯಮ ಇರುತ್ತದೆ ಎಂದರೆ ಸರಿ. ನಾವು ಆ ರೀತಿ ಯಾವುದೇ ಜಾಗ ಬಿಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ನಿವೇಶನ ನನ್ನ ತಂದೆಗೆ ಮಂಜೂರಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಾಯಿಗೆ

ಮಂಜೂರಾಗಿತ್ತು ಎನ್ನುತ್ತಾರೆ. ನಿಡಿ-1 ರ ಪ್ರಕಾರ ನಮಗೆ 4 ಸೆಂಟು ಜಾಗ ಮಂಜೂರಾಗಿತ್ತು ಎಂದರೆ ಸರಿ. ವಾದಿಯ ತಂದೆಗೂ ಸಹ ನಿವೇಶನ ಮಂಜೂರಾಗಿದ್ದು, ಅವರಿಗೆ ಹಕ್ಕು ಪತ್ರ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು 1994 ರಲ್ಲಿ ಅವರಿಗೂ ಕೂಡ ಹಕ್ಕು ಪತ್ರ ನೀಡಿರುತ್ತಾರೆ ಎನ್ನುತ್ತಾರೆ. ವಾದಿಗಳಿಗೆ 91.044940 ಚದರ ಮೀಟರ್ ಜಾಗ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರಿಗೆ 2.25 ಸೆಂಟ್ ಜಾಗ ಮಂಜೂರಾಗಿತ್ತು ಎನ್ನುತ್ತಾರೆ. 91.044940 ಚದರ ಮೀಟರ್ ಪೈಕಿ ವಾದಿಗಳು 80.82561 ಚದರ ಮೀಟರ್ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ವಾದಿಗಳಿಗೆ ಅವರ ಮನೆ ಮತ್ತು ನಿವೇಶನ ಬಾಪ್ತು ಫಾರಂ-3 ನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಸದರಿ ಸ್ವತ್ತು ಮಡಿಕೇರಿಯ ಮಂಗಳದೇವಿ ನಗರದ ಬ್ಲಾಕ್ ನಂಬರ್ 16, ವಾರ್ಡ್ ನಂಬರ್ 17 ರಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ದಾವಾ ಸ್ವತ್ತು ಆಶ್ರಯ ಅಡಿ ಯೋಜನೆ ಅಡಿ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಕಂದಾಯ ದಾಖಲೆಗಳು ವಾದಿಯ ತಂದೆಯ ಹೆಸರಿಗೆ ಬಂದಿತ್ತು ಎಂದರೆ ಸರಿ. ವಾದಿಯ ತಂದೆ ದಾವಾ ಸ್ವತ್ತಿಗೆ ಕಂದಾಯ ಕೂಡ ಪಾವತಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆ ವಾದಿಗೆ ದಾವಾ ಸ್ವತ್ತನ್ನು ನೋಂದಾಯಿತ ದಾನ ಪತ್ರದ ಮುಖಾಂತರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಕಂದಾಯ ದಾಖಲೆಗಳು ವಾದಿಯ ಹೆಸರಿಗೆ ಆಗಿದ್ದು, ವಾದಿ ಕಂದಾಯ ಕೂಡ ಪಾವತಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ನನ್ನ ಮನೆ ಇದೆ ಎಂದರೆ ನನಗೆ ದಿಕ್ಕುಗಳ ಬಗ್ಗೆ ಗೊತ್ತಿಲ್ಲ. ವಾದಿಯ ತಂದೆ ಹಾಗೂ ನನ್ನ ತಂದೆ ಇಬ್ಬರೂ ಖರ್ಚು ಹಾಕಿ ನಮ್ಮ ಹಾಗೂ ಅವರ ನಿವೇಶನದ ಬಗ್ಗೆ ಒಂದು ಕಾಂಪೌಂಡ್ ಕಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 2011 ರಲ್ಲಿ ನನ್ನ ತಂದೆ ಮೌತಿ ಆಗಿರುತ್ತಾರೆ. 2013 ರಲ್ಲಿ ನಾನು ಮತ್ತು ನನ್ನ ತಾಯಿ ಸೇರಿ ಆ ರೀತಿ ಮೊದಲು ಕಟ್ಟಿದ ಕಾಂಪೌಂಡ್ ವಾಲಿಗೆ ಒಂದು ಬದಿಯಲ್ಲಿ ಎರಡು ಕಿಟಕಿ ಹಾಗೂ ಒಂದು ಕಾರು ಶೆಡ್ಡನ್ನು ಕಟ್ಟಿ ಆಲ್ಟರ್ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-19 ಫೋಟೋದಲ್ಲಿ ಕಾಣುವ ಗೋಡೆಗೆ ನಾವು 2 ಕಿಟಕಿಯನ್ನು ಅಳವಡಿಸಿರುವುದು ಕಾಣುತ್ತದೆ ಎಂದರೆ ಸರಿಯಲ್ಲ. ಹಾಗಾದರೆ ನಿಪಿ-20 ರಲ್ಲಿ ಆ ಗೋಡೆಗೆ

ಅಳವಡಿಸಿರುವುದು ಏನು ಎಂದರೆ ಅದು ಕಿಟಕಿಗಳು ಎನ್ನುತ್ತಾರೆ. ನಿಪಿ-20 ರ ಪ್ರಕಾರ ಗೋಡೆಯ ಮೇಲೆ ಎರಡು ಪಿಲ್ಲರ್ ರಚನೆ ಆಗಿದೆ ಎಂದರೆ ಸಾಕ್ಷಿ ಇಲ್ಲ ಮೂರು ಪಿಲ್ಲರ್ ರಚನೆ ಆಗಿದೆ ಎನ್ನುತ್ತಾರೆ. ನಾವು ಸದರಿ ಗೋಡೆಯ ಮೇಲೆ ಪಿಲ್ಲರ್ ಗಳನ್ನು ರಚನೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-20 ರಲ್ಲಿ ಕಾಣುವ ಗೋಡೆಗೆ ಪ್ಲಾಸ್ಟಿಂಗ್ ಏನಾದರು ಮಾಡಿರುವುದು ಕಂಡು ಬರುತ್ತದಾ ಎಂದರೆ ಸಾಕ್ಷಿಯು ಸ್ವಲ್ಪ ಭಾಗಕ್ಕೆ ಕಂಡು ಬರುತ್ತದೆ, ಮತ್ತೊಂದು ಭಾಗಕ್ಕೆ ಇಲ್ಲ ಎನ್ನುತ್ತಾರೆ. ನಿಪಿ-22 ರ ಪ್ರಕಾರ ಇಟ್ಟಿಗೆಗಳು ಕಂಡು ಬರುತ್ತದೆಯೇ ಹೊರತು ಪ್ಲಾಸ್ಟಿಂಗ್ ಕಂಡು ಬರುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎರಡೂ ಕಂಡು ಬರುತ್ತಿದೆ ಎನ್ನುತ್ತಾರೆ. ನಿಪಿ-22 ರಲ್ಲಿ ಇರುವ ಪ್ರಕಾರ ಒಂದು ಇಟ್ಟಿಗೆಯ ಮೇಲೆ ಇನ್ನೊಂದು ಇಟ್ಟಿಗೆಯನ್ನು ಇಡಲಾಗಿದೆಯೇ ಹೊರತು ಪ್ಲಾಸ್ಟಿಂಗ್ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-22 ರಲ್ಲಿ ಕಾಣುವ ಇಟ್ಟಿಗೆಗಳೆಲ್ಲಾ ಮಗುಚಿ ಬೀಳುವ ಸ್ಥಿತಿಯಲ್ಲಿ ಇದೆ ಎಂದರೆ ಸರಿಯಲ್ಲ. 2013 ರಲ್ಲಿ ನಾವು ಗೋಡೆಗೆ ಎರಡು ಕಿಟಕಿ ಮತ್ತು ಕಾರು ಶೆಡ್ಡನ್ನು ಮಾಡುತ್ತಿದ್ದಾಗ ವಾದಿಯ ತಂದೆ ಅದನ್ನು ವಿರೋಧಿಸಿ ನಮ್ಮ ವಿರುದ್ದ ಸಿ ಎಂ ಸಿ ಮತ್ತು ಮೂಡಾಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ಆ ರೀತಿ ದೂರು ನೀಡಿದರೂ ಕೂಡ ಸಿ ಎಂ ಸಿ ಅವರು ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-23 ರಲ್ಲಿ ಕಾಣುವ ಗೋಡೆಗೆ ಯಾವುದೇ ಪ್ಲಾಸ್ಟಿಂಗ್ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಡಿಸೈನ್ ವರ್ಕ್ ಮಾಡಿರುತ್ತೇವೆ ಎನ್ನುತ್ತಾರೆ. ನಿಪಿ-23 ರ ಪ್ರಕಾರ ಯಾವುದೇ ಡಿಸೈನಿಂಗ್ ವರ್ಕ್ ಆಗಿಲ್ಲ ಬರೀ ಇಟ್ಟಿಗೆ ಇಟ್ಟಿರುವುದು ಕಾಣುತ್ತಿದೆ ಎಂದರೆ ಸರಿಯಲ್ಲ, ಲೈನ್ಸ್ ಇರುತ್ತದೆ ಎನ್ನುತ್ತಾರೆ. ನಾನು ಲೈನ್ಸ್ ಇದೆ ಎಂದು ಹೇಳುತ್ತಿರುವುದು ಎರಡು ಇಟ್ಟಿಗೆಗಳ ನಡುವೆ ಇರುವ ಜಾಗವನ್ನು ಎಂದರೆ ಸರಿಯಲ್ಲ. ನಿಪಿ-24 ರಲ್ಲಿ ಕಾಣುವ ಪಿಲ್ಲರನ್ನು ನಾನು ಅಳವಡಿಸಿರುತ್ತೇನೆ ಎಂದರೆ ಸರಿ. ನಿಪಿ-25 ಮತ್ತು 26 ರಲ್ಲಿ ಇಟ್ಟಿಗೆಗಳು ಶಿಥಿಲಗೊಂಡ ಸ್ಥಿತಿಯಲ್ಲಿ ಕಂಡು ಬರುತ್ತಿವೆ ಎಂದರೆ ಸರಿಯಲ್ಲ. ನಿಪಿ-28 ಫೋಟೋದಲ್ಲಿ ಅಡಿಯಲ್ಲಿರುವ ಭಾಗ ಬೇರೆ ರೀತಿ ಇದ್ದು, ಮೇಲೆ ಇರುವ ಭಾಗ ಬೇರೆ ರೀತಿ ಇದೆ ಎಂದರೆ ಸರಿ. ಆ ಮೇಲೆ ಇರುವ ಬೇರೆ ರೀತಿಯ ಭಾಗವನ್ನು ನಾವು ನಿರ್ಮಾಣ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-8 ಫೋಟೋದಲ್ಲಿ ನಿಂತಿರುವ ವ್ಯಕ್ತಿ ನೀವಾ ಎಂದರೆ ಅದು ಯಾರು ಎಂದು ನನಗೆ

ಸರಿಯಾಗಿ ಕಾಣುತ್ತಿಲ್ಲ. ನಿಪಿ-7 ರಲ್ಲಿ ಕಾಣುವ ಗೋಡೆ ನನ್ನ ತಂದೆ ಹಾಗೂ ವಾದಿಯ ತಂದೆ ಸೇರಿ ಕಟ್ಟಿದ್ದ ಗೋಡೆ ಎಂದರೆ ಸರಿಯಲ್ಲ.

ನಾನು ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ, ನನಗೆ ಇಂಗ್ಲಿಷ್ ಭಾಷೆ ಓದಲು ಬರುವುದಿಲ್ಲ, ನಾನು ಕನ್ನಡ ಮೀಡಿಯಂನಲ್ಲಿ ಓದಿರುತ್ತೇನೆ. ನಿಮ್ಮ ಪ್ರತಿವಾದ ಪತ್ರದಲ್ಲಿ ವಾದಿಯ ಮನೆಯ ಪಕ್ಕ ನನ್ನ ತಂದೆ ಗೋಡೆ ಕಟ್ಟಿಸಿದ್ದರು ಎಂದು ಬರೆಸಿದ್ದೀರಿ ಹಾಗಾದರೆ ನೀವು ಹೇಳುವ ಗೋಡೆ ಯಾವುದು ಎಂದರೆ ನಗರ ಸಭೆಯ ರಸ್ತೆಯ ಪಕ್ಕ ಇರುವ ಗೋಡೆ ಎನ್ನುತ್ತಾರೆ. ಆ ರೀತಿ ನಗರ ಸಭೆಯ ರಸ್ತೆಯ ಪಕ್ಕ ಕಟ್ಟಿಸಿದ ಗೋಡೆ ವಾದಿಯ ದಾವಾ ಸ್ವತ್ತಿನ ಪಕ್ಕ ಇರುವುದಿಲ್ಲ. ನಿಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ಸೆಟ್ ಬ್ಯಾಕ್ ಏರಿಯಾವನ್ನು ಅತಿಕ್ರಮಿಸಿಕೊಂಡಿದ್ದಾರೆ ಮತ್ತು ರಸ್ತೆ ನಿರ್ಮಾಣ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದೀರಿ ಹಾಗಾದರೆ ಅವರು ಆ ರೀತಿ ಮಾಡಿದರು ಎಂದು ಹೇಳಿ ನೀವೇನಾದರು ಸಿ ಎಂ ಸಿ, ಮುಡಾ, ಪೊಲೀಸರಿಗಾಗಲಿ ವಾದಿಯ ವಿರುದ್ಧ ದೂರು ನೀಡಿದ್ದೀರಾ ಎಂದರೆ ನಗರ ಸಭೆಗೆ ನೀಡಿರುತ್ತೇನೆ ಎನ್ನುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳ ಪೈಕಿ ವಾದಿಯ ವಿರುದ್ಧ ನಗರ ಸಭೆಗೆ ನೀಡಿದ ದೂರು ಪ್ರತಿ ಇಲ್ಲ ಎಂದರೆ ಸರಿ. ಆ ರೀತಿ ವಾದಿಯು ಸೆಟ್ ಬ್ಯಾಕ್ ಏರಿಯಾವನ್ನು ಅತಿಕ್ರಮಿಸಿಕೊಂಡಿದ್ದಾರೆ ಮತ್ತು ರಸ್ತೆ ನಿರ್ಮಾಣ ಮಾಡಿಕೊಂಡಿದ್ದಾರೆ ಎಂದು ಹೇಳಿ ನೀವೇನಾದರು ವಾದಿಯ ವಿರುದ್ಧ ದಾವೆ ಹೂಡಿದ್ದೀರಾ ಎಂದರೆ ಹೌದು ಹೂಡಿದ್ದೇವೆ ಎನ್ನುತ್ತಾರೆ. ಸದರಿ ದಾವೆ ಯಾವ ನ್ಯಾಯಾಲಯದಲ್ಲಿ ಇದೆ ಹಾಗೂ ಅದರ ಸಂಖ್ಯೆ ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದ ವಿಚಾರವನ್ನು ಹೇಳುವಾಗ ನನ್ನ ವಕೀಲರಿಗೆ ನಾನು ವಾದಿಯ ವಿರುದ್ಧ ಸಲ್ಲಿಸಿರುವ ದಾವೆಯ ಬಗ್ಗೆ ವಿಚಾರ ತಿಳಿಸಿದ್ದೆ. ಸದರಿ ದಾವೆಯ ದಾಖಲೆಗಳನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ನಾನು ಮಾಹಿತಿ ಕೊಟ್ಟರೂ ಸಹ ನನ್ನ ವಕೀಲರು ಆ ದಾವೆಯ ಬಗ್ಗೆ ಪ್ರತಿವಾದ ಪತ್ರದಲ್ಲಿ ನಮೂದು ಮಾಡದಿರಲು ಏನು ಕಾರಣ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ನಾನು ವಾದಿಯ ವಿರುದ್ಧ ಆ ರೀತಿ ಯಾವುದೇ ದಾವೆ ಹಾಕಿಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆ ಸುಬ್ಬಯ್ಯ ನನ್ನ ಜೊತೆ ಚೆನ್ನಾಗಿದ್ದರು . ವಾದಿಯ ಗಂಡ ಕೃಷ್ಣರವರು ನನಗೆ ಗೊತ್ತು ಎಂದರೆ ಸರಿ. ವಾದಿಯ ತಂದೆ ಹಾಗೂ ಗಂಡ

ಪಾರ್ಶ್ವ ವಾಯು ರೋಗಿಗಳಾಗಿದ್ದರು ಎಂದು ನನಗೆ ಗೊತ್ತಿಲ್ಲ. ವಾದಿಯ ತಂದೆ ಪಾರ್ಶ್ವ ವಾಯುವಿನಿಂದ ಮೃತ ಪಟ್ಟ ವಿಚಾರ ಗೊತ್ತಾ ಎಂದರೆ ಅವರು ಮೃತ ಪಟ್ಟ ವಿಚಾರ ಗೊತ್ತು ಆದರೆ ಕಾರಣ ಗೊತ್ತಿಲ್ಲ. ದಿಃ 11.07.2022 ರಂದು ವಾದಿ ತಿರುಪತಿಗೆ ಹೋಗಿದ್ದಾಗ ಆ ಸಮಯವನ್ನು ದುರುಪಯೋಗ ಪಡಿಸಿಕೆಂಡು ನಾನು ಕಾಂಪೌಂಡ್ ವಾಲ್ ಮೇಲೆ ಪಿಲ್ಲರ್ ಹಾಕಿದ್ದೇನೆ ಎಂದರೆ ನಾನು ದುರುಪಯೋಗ ಪಡಿಸಿಕೊಂಡಿಲ್ಲ. ಕಾಂಪೌಂಡ್ ಮೇಲೆ ನೀವು ಪಿಲ್ಲರ್ ಗಳನ್ನು ಕೂರಿಸಿ ಗೋಡೆಯನ್ನು ರಚನೆ ಮಾಡಿದ್ದೇನೆ ಎಂದರೆ ಯಾವುದೇ ಕಾರಣಕ್ಕೂ ಕಾಂಪೌಂಡ್ ಮೇಲೆ ಪಿಲ್ಲರ್ ಗಳನ್ನು ಕೂರಿಸಲು ಆಗುವುದಿಲ್ಲ ಎನ್ನುತ್ತಾರೆ. ನಾನು ಮನೆ ಕಟ್ಟುವ ಸಲುವಾಗಿ ಆ ರೀತಿ ಪಿಲ್ಲರನ್ನು ಕೂರಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆ ಸೋರುತ್ತೆ ಎಂದು ಶೀಟ್ ಹಾಕಲು ಪಿಲ್ಲರ್ ಕೂರಿಸಿದ್ದೆ ಎನ್ನುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ನಮ್ಮ ಮನೆ ಸೋರುತ್ತೆ ಎಂದು ಶೀಟ್ ಹಾಕಲು ಪಿಲ್ಲರ್ ಕೂರಿಸಿದ್ದೇನೆ ಎಂದು ಹೇಳಿದ್ದೇನೆ. ನಾವು ಕೂರಿಸಿದ ಪಿಲ್ಲರ್ ಗಳ ಅಗಲ ಎಷ್ಟು ಎಂದು ನನಗೆ ಹೇಳಲು ಆಗುವುದಿಲ್ಲ. ಆ ರೀತಿ ಪಿಲ್ಲರ್ ಹಾಕಲು ನೀವೇನಾದರು ನಗರ ಸಭೆಯಿಂದ ಅನುಮತಿ ಪಡೆದುಕೊಂಡಿದ್ದಿರಾ ಎಂದರೆ ಸಾಕ್ಷಿಯು ಅನುಮತಿ ಪತ್ರ ಕೊಟ್ಟಿದ್ದರು, ಅದು ನಮಗೆ ತಲುಪುವ ಮೊದಲೇ ನಾನು ಪಿಲ್ಲರ್ ಗಳನ್ನು ನಿರ್ಮಾಣ ಮಾಡಿದ್ದೇನೆ. ಅನುಮತಿ ಪತ್ ರನಮಗೆ ತಲುಪುವ ಮೊದಲೇ ನಾವು ಆ ರೀತಿ ಪಿಲ್ಲರ್ ಗಳನ್ನು ನಿರ್ಮಾಣ ಮಾಡಿರುವುದು ಕಾನೂನು ಬಾಹಿರ ಎಂದರೆ ಸರಿಯಲ್ಲ. ವಾದಿ ತಿರುಪತಿಯಿಂದ ಬಂದ ಮೇಲೆ ನನ್ನ ವಿರುದ್ದ ನಗರ ಸಭೆಯವರಿಗೆ ದೂರು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಭಾಷೆ ಓದಲು ಬರುತ್ತದೆ ಎಂದರೆ ಸರಿ. ನನ್ನ ಹೆಸರು ಗಿರಿಶೇಖರ್. ನಿಪಿ-17 ರಂತೆ ನಗರ ಸಭೆಯವರು ನನಗೆ ಅನಧಿಕೃತವಾಗಿ ಕಟ್ಟಡ ಕಟ್ಟುವುದನ್ನು ನಿಲ್ಲಿಸಬೇಕು ಎಂದು ನೋಟಿಸ್ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-17 ರಲ್ಲಿ ಕಾಣುವ ವಿಳಾಸ ಹಾಗೂ ಮೊಬೈಲ್ ನಂಬರ್ ನನ್ನದೇ ಎಂದರೆ ಸರಿ. ನಿಪಿ-18 ರಲ್ಲಿ ಇರುವ ಪೋಟೋದಲ್ಲಿ ಕಾಣುವ ವ್ಯಕ್ತಿ ವಾದಿ ಎಂದರೆ ಆಗಿರಬಹುದು. ನಿಪಿ-18 ವಾದಿಗೆ ಸಂಬಂಧ ಪಟ್ಟ ಫಾರ್ಮ್ -3 ಎಂದರೆ ನನಗೆ ಹೇಳಲು ಆಗುವುದಿಲ್ಲ. ನಿಪಿ-19 ಪೋಟೋದಲ್ಲಿ ಕಾಣುವ ಕಾರು ವಾದಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಸಿ ಎಂ ಸಿ ಇಂಜಿನಿಯರ್ ರವರು ಬಂದು ನಾವು ನಿರ್ಮಾಣ ಮಾಡುತ್ತಿದ್ದ ಕೆಲಸ

ವನ್ನು ನಿಲ್ಲಿಸಬೇಕು ಎಂದು ಹೇಳಿ ಸೂಚನೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಹೇಳಿರುವ ಚೆಕ್ಕುಬಂಧಿಯೇ ನಮ್ಮ ಆಸ್ತಿಯ ಚೆಕ್ಕು ಬಂಧಿ ಎಂದರೆ ಸರಿ. ನಿಮ್ಮ ಮನೆ ಸೋರುತ್ತಿದೆ ಎಂದು ಅದಕ್ಕೆ ಶೀಟ್ ಅಳವಡಿಸಿಕೊಳ್ಳಲು ಪಿಲ್ಲರ್ ಹಾಕಬೇಕು ಎಂದು ಹೇಳಿ ನೀವೇನಾದರು ನಗರ ಸಭೆಯವರಿಗೆ ಮನವಿ ಪತ್ರ ನೀಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಡಿ-3 ರಲ್ಲಿ ತೋರಿಸಿರುವ ಚೆಕ್ಕುಬಂಧಿಯೇ ನಮ್ಮ ನಿವೇಶನಕ್ಕೆ ಇರುವ ಚೆಕ್ಕು ಬಂಧಿ ಎಂದರೆ ಸರಿ. ನಾನು ಶೀಟ್ ಅಳವಡಿಸಿಕೊಳ್ಳಲು ಪಿಲ್ಲರ್ ಹಾಕಬೇಕು ಅನುಮತಿ ಕೊಡಿ ಎಂದು ಕೋರಿದ ಮನವಿಗೆ ಸಿ ಎಂ ಸಿ ರವರು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ನಾನು ನಗರ ಸಭೆಯಿಂದ ಅನುಮತಿ ಇಲ್ಲದೆ ಪಿಲ್ಲರನ್ನು ರಚನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನೀವೇನಾದರು ಪಿಲ್ಲರ್ ಅಳವಡಿಸಲು ಇಂಜಿನಿಯರ್ ಅವರಿಂದ ಬ್ಲೂ ಪ್ರಿಂಟ್ ಮಾಡಿಸಿದ್ದು ಉಂಟಾ ಎಂದರೆ ಸಾಕ್ಷಿ ಇಲ್ಲ ಮಾಡಿಸಿಲ್ಲ ಎನ್ನುತ್ತಾರೆ. ನಿಡಿ-4 ರಲ್ಲಿ 9 ನೇ ಶರತ್ತಿನಲ್ಲಿ ಈ ಬಗ್ಗೆ "ತಕರಾರು ಬಂದಲ್ಲಿ ಹಾಗೂ ಜೀವಕ್ಕೆ ಅಪಾಯ ಸಂಬಂಧಿಸುವ ಸಂದರ್ಭದಲ್ಲಿ ಆ ಕೊಡಲೇ ಕೆಲಸವನ್ನು ನಿಲ್ಲಿಸಬೇಕಾಗುತ್ತದೆ " ಎಂಬ ಶರತ್ತು ಇದೆ ಎಂದರೆ ಸರಿ. ನಗರ ಸಭೆಯವರಿಂದ ಕಟ್ಟಡ ನಿರ್ಮಾಣಕ್ಕೆ ನೀಡುವ ಲೈಸನ್ಸ್ ನಲ್ಲಿ ಮೇಲೆ ಹೇಳಿದ ಶರತ್ತು ಇರುತ್ತದೆ ಎಂದರೆ ಸರಿ. ನಾನು ಕಾಂಪೌಂಡ್ ಮೇಲೆ ಪಿಲ್ಲರ್ ಗಳನ್ನು ಹಾಕಿರುವುದರಿಂದ ಆ ಕಾಂಪೌಂಡ್ ಬಿದ್ದು ಹೋಗುವ ಎಲ್ಲಾ ಸಾಧ್ಯತೆ ಇದ್ದು ಮೇಲೆ ಹೇಳಿದ ಶರತ್ತಿನ ಉಲ್ಲಂಘನೆ ಆಗುತ್ತದೆ ಎಂದರೆ ಕಾಂಪೌಂಡ್ ಇರುವುದಿಲ್ಲ.

(ಮುಂದುವರೆದ ಪಾಟಿ ಸವಾಲಿಗೆ ಸಮಯವಾಕಾಶ ಕೋರಿದ್ದು, ಸಮಯವಾಕಾಶ ನೀಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-***

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**